Regd No BG 155

Sri "SATYAVADI"
— DAILY —
MYSORE4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ವಿಡಿ ಪ್ರತಿ 3 ಪೈ

3—4—1962

ಪ ವ. ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಕಾಶ್ಮೀರ ಚರ್ಚೆಗೆ ಭಾರತ ಸರಕಾರ ಅಂಗೀಕರಿಸುವ ಸಂಭವ

ಲಂಚದ ಆರೋಪಣೆ

ಕೇರಳ ವಿಧಾನ ಸಭೆಯಲ್ಲಿ ನಿನ್ನೆ ಕಮ್ಯೂನಿಸ್ಟು ಸದಸ್ಯರು ಮಾತನಾಡಿ ಪಿಡಬ್ಲ್ಯೂಡಿ ಮಂತ್ರಿ ಶ್ರೀ ಡಿದಾಮೋದರ್ ಪಿಳ್ಳೆ ಮತ್ತು ಅವರ ಶಾಖೆಯ ಅಧಿಕಾರಿಗಳು ಕೋಟ್ಯಂತರ ರೂಪಾಯಿ ಲಂಚ ತಿನ್ನುತ್ತಿದ್ದಾರೆಂದು ಆರೋಪಿಸಿದರು.

ಮತದಾರರ ವಿರೋಧ

ದೇಶದಲ್ಲಿ ಅಣು ಆಯುಧಗಳ ಉತ್ಪಾದನೆ, ಪ್ರವೇಶ, ಸಾಗಾಣಿಕೆ ಅಥವ ಬಳಕೆ ಇವುಗಳನ್ನು ಕೂಡಲೇ ನಿಷೇಧಿಸಬೇಕೆಂದು ಸ್ವಿಟ್ಜರ್ಲೆಂಡಿನ ಮತದಾರರು ಮತಸಂಗ್ರಹದಲ್ಲಿ ತಿಳಿಸಿದ್ದಾರೆ. ಮತದಾರರ ಗಂಡಸರು

ವಿಷಪ್ರಾಶನ ಆರೋಪ

ಬಾಗೆಪಲ್ಲಿ ತಾಲ್ಲೂಕಿನ ಶ್ರೀನಿವಾಸಪುರದಲ್ಲಿ ಶಾಸ್ತ್ರವಾರ ಚಿಕ್ಕವೆಂಕಟರಾಯ ಎಂಬವನು ತನ್ನ ಅಣ್ಣಾ ದೊಡ್ಡ ವೆಂಕಟರಾಯುನಿಗೆ ಕೋಳಿಸಾರಿನ ಸೂಪನ್ನು ಇತ್ತನು. ಅದನ್ನು ಕುಡಿದ ಅಣ್ಣನ ಪತ್ನಿ ಅವನ ಹೆಂಡತಿ ಸತ್ತರು. ಮಕ್ಕಳಿಲ್ಲದ ಅವರ ಪ್ರತ್ಯನ್ನು ಹೊಂದಲು ಸೂಪಿಗೆ ವಿಷಮಿಶ್ರ ಮಾಡಿದುದಾಗಿ ಅವಾದಿತ ತಿಳಿಸಿರುವುದಾಗಿ ವರದಿ.

ಹೈಕೋರ್ಟ್ ನ್ಯಾಯಾಧೀಶರು

ಈಗ ಮೈ ಸೂರು ಹೈಕೋರ್ಟಿನ ಅಡಿಷನಲ್ ನ್ಯಾಯಾಧೀಶರಾಗಿರುವ ಜಸ್ಟಿಸ್ ಭೀಮಪ್ಪ ವಿರೂಪಾಕ್ಷಪ್ಪಕಲ್ಲಟೆಯವರನ್ನು ಮತ್ತು ಅಡ್ವೊಕೇಟರಾದ ಶ್ರೀ ಗುರುಪಾದಪ್ಪ ಗೋವಿಂದ ಭಟ್ಟರನ್ನು ಮೈಸೂರು ಹೈಕೋರ್ಟಿನ ಖಾಯಂ ನ್ಯಾಯಾಧೀಶರನ್ನಾಗಿ ನೇಮಿಸುವ ಪ್ರಕಟಣೆ ನಿನ್ನೆ ದೆಹಲಿಯಲ್ಲಿ ಹೊಂಟಿದೆ. ಈಗ ಮೈಸೂರು ಸರ್ಕಾರದ ಅಡ್ವೊಕೇಟ್ ಜನರಲ್ ಶ್ರೀ ಕವಟ್ಟಣ್ಣ ಕಬೇರಪ್ಪ ಶುಕ್ಲೂರ ಅವರು ಕಳೆದ ವರ್ಷ ಹೈಕೋರ್ಟಿನ ಅಡಿಷನಲ್ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಾಗಿದ್ದಾರೆ

ಭಾರತದ ನೂತನ ಸರ್ಕಾರ ಸ್ಥಾಪನೆಯಾದಾಗ ಈ ಮಾಸಾಂತ್ಯದಲ್ಲಿ ವಿಶ್ವ ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಚರ್ಚೆ ನಡೆಯಲು ಭಾರತ ಒಡಂಬಡುವ ಸಂಭವವಿದೆ ಎಂದು ನವ ದೆಹಲಿಯಿಂದ ಬಂದ ವಾರ್ತೆ ತಿಳಿಸುತ್ತದೆ. ಸಮಸ್ಯೆಯು ಒದಗಿಬಂದಿರುವ ಅಂಶವನ್ನು, ಈಗಿನ ಪರಿಸ್ಥಿತಿಯು ನಿಜವಾದ ವಿಚಾರಪನ್ನು ಸಮಿತಿಯು ಗಮನಕ್ಕೆ ತರಲು ಭಾರತ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುವುದು

ದ್ರೋಹಿಗಳನ್ನು ಓಡಿಸಿ

ದ್ರೋಹಿಗಳನ್ನು ಹೊಂಗೆಹಾಕಿ ಕಾಂಗ್ರೆಸು ಸಂಸ್ಥೆಯನ್ನು ಶುದ್ಧಿ ಮಾಡಬೇಕಾದುದು ಖಂಡಿತವಾದ ಕಾರ್ಯವೆಂದು ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ನಿನ್ನೆ ಬೆಂಗಳೂರಿನಲ್ಲಿ ಕಾಂಗ್ರೆಸು ಕಾರ್ಯಕರ್ತರ ಸಭೆಯಲ್ಲಿ ತಿಳಿಸಿದರು. ದೇಶದಲ್ಲಿ ಕಾಂಗ್ರೆಸು ಸೋಲಲು ಒಳಗಿರುವ ತಪ್ಪೇ ಕಾರಣ ಎಂದು ಅವರು ನುಡಿದರು. ಬಳತೊಂದರೆ ಹೋಗಲೇಬೇಕು. ಶಸ್ತ್ರ ಚಿಕಿತ್ಸೆ ಅಗತ್ಯವಾದರೆ ಅದನ್ನೂ ಮಾಡಬೇಕು ಎಂದು ಅವರು ಪ್ರದೇಶ ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ತಿಳಿಸಿದರು.

ನಾಯಕರ ಆಯ್ಕೆ

ನವ ದೆಹಲಿಯಿಂದ ಬಂದಿರುವ ವರದಿಯ ಪ್ರಕಾರ ಪಾರ್ಲಿಮೆಂಟರಿ ಕಾಂಗ್ರೆಸು ಪಕ್ಷದ ಚುನಾವಣೆ ಈ ಮಧ್ಯಾಹ್ನ ಸಭೆಗೆ ಪಂ|| ನೆಹರು ಈ ದಿನ ಹಾಜರಾಗುವುದಿಲ್ಲ ಅವರ ಗೈರು ಹಾಜರಿಯಲ್ಲಿ ಅವರನ್ನು ನಾಯಕರನ್ನಾಗಿ ಸರ್ವಾನುಮತ ಅರಿಸಲಾಗುವುದು.

ಲೋಕಸಭೆ

ನೂತನ ಲೋಕಸಭೆಯ ಅಧಿವೇಶನ ಈ ಮಾಹೆ 16 ನೆಯ ತಾ|| ಮಧ್ಯಾಹ್ನ 1 ಗಂಟೆಗೆ ಸಮಾವೇಶವಾಗುವುದು.

ಹೊಸ ರಾಜ್ಯಪಾಲರು

ಭಾರತ ಸರ್ಕಾರದ ಸಂಪರ್ಕ ಶಾಖೆಯ ಮಂತ್ರಿಯವರಾದ ಡಾ|| ಪಿ ಸುಬ್ಬರಾಯುಡುರವರ ಶ್ರೀ ಶ್ರೀಪ್ರಕಾಶರ ಸ್ಥಾನದಲ್ಲಿ ವಿಹಾರರಾಷ್ಟ್ರದ ರಾಜ್ಯಪಾಲರಾಗಿ ನೇಮಿತರಾಗಿರುವರು. ಮೈಸೂರಿನ ರಾಜ್ಯಪಾಲರಾಗಿ ಮುಂದುವರಿಯುವ ಶ್ರೀ ಜಯಚಾಮರಾಜ ಒಡೆಯರವರನ್ನು ಮತ್ತು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಮುಂದುವರಿಯುವಂತೆ ಶ್ರೀಮತಿ ಪದ್ಮಜಾ ನಾಯ್ಡುರವರನ್ನು ಭಾರತದ ಅಧ್ಯಕ್ಷರು ಕೋರಿರುವರೆಂದು ನವ ದೆಹಲಿ ವಾರ್ತೆ. ಒರಿಸ್ಸಾದ ಮಾಜಿ ಮುಖ್ಯ ಮಂತ್ರಿ ಶ್ರೀ ಎಶ್ವಿನಾಥ ದಾಸರು ಉತ್ತರ ಪ್ರದೇಶದ ರಾಜ್ಯಪಾಲರಾಗಿ ನೇಮಿತರಾಗಿರುವರು. ಸ್ಪೀಕರಾಗಿರುವ ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ಯರು ಬಿಹಾರಿನ ರಾಜ್ಯಪಾಲರು. ಉತ್ತರ ಪ್ರದೇಶದ ಮಾಜಿ ಮುಖ್ಯ ಮಂತ್ರಿ ಡಾ|| ಸಂಪೂರ್ಣಾನಂದರು ರಾಜಸ್ಥಾನ ರಾಜ್ಯಪಾಲರು.

ಶಂಕುಸ್ಥಾಪನೆ

ಈ ದಿನ ಸಂಜೆ ಮೈಸೂರಿಗೆ ಶ್ರೀಮತ್ ಜಗದ್ಗುರು ಶ್ರೀನಿದುತ್ತರಾದಿ ಮಠಾಧೀಶರಾದ ಶ್ರೀ ಶ್ರೀ 108 ಶ್ರೀ ಸತ್ಯಪ್ರಮೋದ ತೀರ್ಥ ಶ್ರೀಪಾದಂಗಳವರು ಆಗಮಿಸುವರು. ನಾಡಿದ್ದು ಬೆಳಿಗ್ಗೆ ಶ್ರೀ ಶ್ರೀ ಯವರು ಶ್ರೀ ಉತ್ತರಾದಿಮಠದಲ್ಲಿರುವ ಶ್ರೀ ಮುಖ್ಯ ಪ್ರಾಣದೇವರ ದೇವಸ್ಥಾನದ ಜೀರ್ಣೋದ್ಧಾರಕಾರ್ಯಕ್ಕೆ ತಮ್ಮ ಅಮೃತಹಸ್ತದಿಂದ ಶಂಕುಸ್ಥಾಪನೆಯ ಕಾರ್ಯವನ್ನು ನೆರವೇರಿಸುವರು.

★

ಬೆಳ್ಳಿ ಸಿಗೊ ಜ್ವಾಲಾಮುಖಿ ನಿನ್ನೆಯಿಂದ ಏಕಪ್ರಕಾರ ಸಿಡಿಯುತ್ತಿರುವುದರಿಂದ ನಾಂಗುವದಲ್ಲಿ ಜನರಿಗೆ ಗಾಬರಿ ಉಂಟಾಗಿದೆ.

ವಿವಿಧ ವಿಷಯಗಳು

ಕಳೆದ ತಂತ್ಕಾಲದಲ್ಲಿ ರಷ್ಯ ಮಾಡಿದ ಅಣು ಪ್ರಯೋಗವನ್ನು ಅವೆರಿಕ ಗಣಿಸುವದಿಲ್ಲವೆಂದು, ತನ್ನ ಅಣು ಪ್ರಯೋಗವನ್ನು ಬಿಡುವದೆಂದು, ಆದರೆ ಮಾತ್ರ ತಮ್ಮ ರಕ್ಷಣೆ ಆಗಬೇಕೆಂದು ಜಿನೀವಾದಲ್ಲಿ ಸೇರಿರುವ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಅಮೆರಿಕ ಪ್ರತಿನಿಧಿ ಆರ್ಥರ್ ಡೀನ್ ನಿನ್ನೆ ತಿಳಿಸಿದರು.

ವಿದ್ಯುತ್ತಿನ ಪ್ರಾಜೆಕ್ಟು ಮುಗಿಸಲು 5 ವರ್ಷಗಳಾಗುವದೆಂದು, ಇದು ಯೋಜನೆಗಾರರಿಗೆ ಯೊಂದನ್ನು ತಿಳಿಸಿಕೊಂಡಿದೆಯೆಂದು, ಪ್ರಾಜೆಕ್ಟಿನ ಒಗ್ಗೆ ಅಭ್ಯಸಿಸಲು ಅವೆರಿಕಕ್ಕೆ ಒಂದು ನಿಯೋಗ ಹೋಗುವುದೆಂದು ದೆಹಲಿ ವಾರ್ತೆ ತಿಳಿಸುತ್ತದೆ

ಅವೆರಿಕದ ವಿಶ್ವಾಸಿಕ ವಿಶ್ವವಿದ್ಯಾನಿಲಯದಲ್ಲಿ ಪ್ರಪ್ರಥಮವಾಗಿ ದಕ್ಷಿಣ ಏಷ್ಯ ವತ್ತು ಅದರ ಭಾಷೆಗಳ ವಿಷಯದ ಬೇಸಿಗೆ ಶಾಲೆಗಳಲ್ಲಿ ಕನ್ನಡಭಾಷೆ ಕಲಿಸಲಾಗುತ್ತೆ. ತೆಲುಗು ಮತ್ತು ಹಿಂದಿ ಭಾಷೆಯ ಶಿಕ್ಷಣವೂ ಉಂಟು.

ಮಂತ್ರಿಮಂಡಲದಲ್ಲಿ ನನಗೆ ಎರಡನೆ ಸ್ಥಾನ ಬೇಕು ಮತ್ತು ಮುಖ್ಯಖಾತೆ ಬೇಕು ಎಂದು ಆಂಧ್ರ ಮಾಜಿ ಮುಖ್ಯ ಮಂತ್ರಿ ಶ್ರೀ ಡಿ. ಸಂಜೀವಯ್ಯನವರು ನಿನ್ನೆ ದೆಹಲಿಯಲ್ಲಿ ಕಾಂಗ್ರೆಸು ನಾಯಕ ವರ್ಗಕ್ಕೆ ತಿಳಿಸಿದರು.

ಪಂ|| ನೆಹರುರವರ ಉಷ್ಣಾಂಕ ನಿನ್ನೆ 100-8 ಕ್ಕೆ ಬಂದಿತೆಂದು ನವದೆಹಲಿ ವಾರ್ತೆ ತಿಳಿಸಿದೆ. ಇಂದು ಮತ್ತು ನಾಳೆ ಅವರು ಯಾವ ಕೆಲಸಕಾರ್ಯಗಳನ್ನಿಟ್ಟುಕೊಂಡಿಲ್ಲ

ಪಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ಯ ಜೋಯಿಸರಿಂದ
ಅಮಾವಾಸ್ಯೆ ಉತ್ತರಾಭಾದ್ರ

ಹ ಣ ದು ಬ್ಬ ರ

1958 ನವೆಂಬರ 9 ವರ್ಷಗಳಲ್ಲಿ 20 ದೊಡ್ಡ ಕೈಗಾರಿಕೆಗಳಲ್ಲಿ ಕೂಲಿಯು ಹಣದ ದಂವು, ಜೀವನದ ಖರ್ಚು ಹೆಚ್ಚಿದಷ್ಟೆ ಆಗಿದೆ– ಎಂಡೂ 118 (1949 ರಲ್ಲಿ 100) : ಈ ಕಾಲದಲ್ಲಿ ಜೀವನದ ಖರ್ಚಿಗಿಂತಲೂ ಕೂಲಿಯು ಹೆಚ್ಚಾಗಿ ಏರಿದೆ ; ಹಣದುಬ್ಬರದಲ್ಲಿ ಜೀವನದ ವೆಚ್ಚದ ಏರಿಕೆಯನ್ನು ತೊಡೆದುಹಾಕುವಷ್ಟು ಕೂಲಿಯು ಹೆಚ್ಚುವುದು : ಕೂಲಿ ದರ ಹೆಚ್ಚುವುದಾದರೂ, ನಿಜವಾದ ಕೂಲಿಯು ಬೆಲೆ ಏರಿಕೆಯ ಹಿಂದೆ ಬೀಳುವುದು

ಇದು ಸಂಬಳದ ವರ್ಗಕ್ಕೂ ಅನ್ವಯಿಸುವುದು ; ರೂಪಾಯಿ ಮೌಲ್ಯ ತಗ್ಗಿದ ಫಲವಾಗಿ, ಇಂದು 300 ರೂಪಾಯಿ ಪಡೆಯುವ ಸಂಸಾರವು, ಯುದ್ಧಕ್ಕೆ ಮುಂಚೆ ರೂ. 63 ಪಡೆಯುತ್ತಿದ್ದ ಸಂಸಾರದಷ್ಟೇ ಉತ್ತಮವಿದೆ ; ಯುದ್ಧಕ್ಕೆ ಮುಂಚೆ ರೂ. 300 ಪಡೆಯುತ್ತಿದ್ದ ಸಂಸಾರ (ಹೆಡ್ ಕ್ವಾರ್ಟರ್ಸ್ ಅನ್ನಿ) ಈಗ ರೂ 1440 ಪಡೆಯುತ್ತಿರುವ ಸಂಸಾರ (ಭಾರತ ಸರಕಾರದ ಡೆಪ್ಯಿ ಸೆಕ್ರೆಟರಿ) ದಷ್ಟೇ ಐಶ್ವರ್ಯವಿದ್ದಂತಾಗಿತ್ತು.

1955–56 ರಲ್ಲಿ ಯೋಜನೆಯ ಹೆಚ್ಚಳವಲ್ಪಟ್ಟಾರಭ್ಯ, ಹಣದ ವರಮಾನದ ಮೌಲ್ಯವು ವರ್ಷಕ್ಕೆ ಶೇಕಡ 6-5 ರಂತೆ ಇಳಿಯುತ್ತಾ 5 ವರ್ಷಗಳಲ್ಲಿ ಶೇಕಡ 39 ಆಗಿದೆ ; ಯೋಜನೆಯಿಂದ ಫಾಯಿದೆ ಪಡೆಯುವವರು ವ್ಯಾಪಾರಿಗಳು, ವಾಣಿಜ್ಯೋದ್ಯಮಿಗಳು, ಕೈಗಾರಿಯವರು, ಭಾರಿ ರೈತರು, ಸಟ್ಟಾವ್ಯಾಪಾರಿಗಳು ಠಾಕೀಯದಲ್ಲಿ ಅಡಳಿತದಲ್ಲಿ ಲಂಚಲುಸವತ್ತುಗಳಿಗೆ ಒಳಗಾದವರು ವಕ್ತು ಅವು ಅನುಭೂತಿಗಳು

ನದಿಯಲ್ಲಿಯು ನೀರಿನವಟ್ಟ, ಪ್ರವಾಹವಿದ್ದರೆ ರುತ್ತದೆ ಹೆಚ್ಚು ಹಣ ಪ್ರಸಾರ -- ಹಣದುಬ್ಬರ -- ವ್ಯಾಂಛವಾದರೆ ಬೆಲೆ ಏರುತ್ತದೆ ಬೆಲೆ ರೇಖೆಯನ್ನು ಹಣದುಬ್ಬರದಲ್ಲಿ ಹಿಡಿಯುವ ಪ್ರಯತ್ನವು ವಿಫಲವು. ಕೆಲವು ಜೀವನಾವಶ್ಯಕ ಪದಾರ್ಥಗಳನ್ನು ಬೇಕಾದ ತರಹದವರಿಗೆ ಕಡಮೆ ಬೆಲೆಯಲ್ಲಿ ದೊರಕಿಸುವುದು ಒಂದು ಹೆಜ್ಜೆಗೆ ಅನುಗ್ರಹ ಇವು ಒಂದು ರೀತಿ ಬಾಯಿಮುಚ್ಚಿಸಲು ಕೊಡುವಂತಹ ಒಂದು ತರಹದ ಲಂಚ (ಡಾ|| ಶೆನ್ಯಾರವರು ಲೇಜಿನದ ಕೆಲ ಮುಖ್ಯಾಂಶ).

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ

ಪ್ರಕಟಣೆ

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ ಹೆಲ್ತ್ ಸೆಕ್ಷ್ ಟ್ರೇಡ್ ಲೈಸೆನ್ಸ್‌ದಾರರುಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ಮುನಿಸಿಪಲ್ ಬೈಲಾ ಛಾಪ್ಟರ್ (chapter) 16, ರೂಲು 3 ರ ಪ್ರಕಾರ ಹೆಲ್ತ್ ಸೆಕ್ಷನ್‌ಗೆ ಸಂಬಂಧಪಟ್ಟ ಲೈಸೆನ್ಸ್‌ಗಳನ್ನು 1962–63 ನೇ ಸಾಲಿಗೆ ರನ್ಯೂ ಮಾಡಿಸಿಕೊಳ್ಳಲು ತಾ || 15–4–1962 ರವರೆಗೆ ಹಾಲಿ ಜಾರಿಯಲ್ಲಿರುವ ಅಪ್ತಿಕೇಷನ್ ಫಾರಂಗಳಲ್ಲಿ ನಿಗದಿಯಾದ ಲೈಸೆನ್ಸು ಫೀಯನ್ನು ಮುನಿಸಿಪಲ್ ಟ್ರೆಜರಿಗೆ ಕಟ್ಟಿ ಸಂಬಂಧಪಟ್ಟ ಚಲ್ತ್ ಮತ್ತು ಹಳೇ ಲೈಸೆನ್ಸುಗಳೊಡನೆ ಈ ಆಫೀಸಿಗೆ ಹಾಜರ್ ಪಡಿಸಿ ತಮ್ಮ ಲೈಸನ್ಸುಗಳನ್ನು ರನ್ಯೂ ಮಾಡಿಸಿಕೊಳ್ಳುವುದು : ತಪ್ಪಿದಲ್ಲಿ ಖಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುವುದು.

ಸಿ. ಆರ್. ಬಾಲಸುಬ್ರಹ್ಮಣ್ಯ
ಹೆಲ್ತ್ ಆಫೀಸರ್
ಸಿಟಿ ಮುನಿಸಿಪಲ್ ಆಫೀಸರ್, ಮೈಸೂರು.

29–3–62

ವುಡ್‌ಲ್ಯಾಂಡ್ಸ್ ದಿಗ್ವಿಜಯ 8 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ– ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಭರಿತ 2 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್
ಸಾರಂಗಪಾಣಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ
ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

SHAKTI

SUDHA

A Superb Tonic

Help The 'Gorakshana'

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

For Quality Printing
L. N. Press
Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅಶೋಕಾ ಫಾರ್ಮಸಿ
ಚಾಮರಾಜ ಬಜಾರ್ ಮೈಸೂರು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.